

## ಗಾಂಧಿ-150 ವಿಶೇಷ

**ಕೇಶವರೆಡ್ಡಿ ಹಂದ್ರಾಳ**



# ನಾನೇ ಗಾಂಧಿ

ಅಂತಿಂಥ ಕನಸಲ್ಲ ಅದು! ಇದ್ದಕ್ಕಿದ್ದಂತೆ ನನ್ನ ದೇಹದಲ್ಲಿ ರೆಕ್ಕೆಗಳು ಮೂಡಿದ್ದವು. ಎಷ್ಟೊಂದು ದೂರ ಹಾರಿದರೂ ಒಂದಿಷ್ಟೂ ಆಯಾಸವಿಲ್ಲ. ಬೆಟ್ಟ, ಸಮುದ್ರ, ಕಾಡು, ನಗರ, ಹಳ್ಳಿ ಎಲ್ಲವನ್ನೂ ಸುತ್ತು ಹೊಡೆದು ವಿಶಾಲವಾದ ಬಯಲಿನಲ್ಲಿ ಕುಳಿತಿದ್ದೆ. ಆಗಸದಿಂದ ದೊಡ್ಡ ಕನ್ನಡಿಯೊಂದು ಕಳಚಿಕೊಂಡು ಬಂದು ನನ್ನ ಮುಂದೆ ನಿಂತಿತ್ತು. ಅದು ಎಂಥಾ ಮಾಯಾ ಕನ್ನಡಿಯೆಂದರೆ ಅದರಲ್ಲಿ ಹಣ, ಆಹಾರ, ವಜ್ರ ವೈಢೂರ್ಯಗಳ ರಾಶಿಗಳು ಎಲ್ಲಂದರಲ್ಲೆ ಬಿದ್ದಿವೆ! ಅವೆಲ್ಲವುಗಳ ಮಧ್ಯೆ ನನ್ನ ಮುಖ ಮಾತ್ರ ಕಾಣುತ್ತಿಲ್ಲ!! ನನ್ನ ಮುಖ ಹುಡುಕಿಕೊಳ್ಳಲು ನಾನು ಕನ್ನಡಿಯೊಳಕ್ಕೆ ಎರಡೂ ಕೈಗಳನ್ನು ತೂರಿಸುತ್ತೇನೆ. ಅರೆ, ಕನ್ನಡಿಯೊಳಕ್ಕೆ ಹೋದ ನನ್ನ ಕೈಗಳು ಅಲ್ಲೆ ಸಿಕ್ಕಿಹಾಕಿಕೊಳ್ಳುತ್ತವೆ. ಕನ್ನಡಿಯಲ್ಲೀಗ ಮೊದಲಿದ್ದ ವಸ್ತುಗಳೆಲ್ಲ ಮಾಯವಾಗಿ ಮುಳ್ಳು, ಪಾಯಿಖಾನೆ, ಸತ್ತ ಇಲಿ ಹೆಗ್ಗಣಗಳು ತುಂಬಿಕೊಂಡಿವೆ. ನಾನು ನನ್ನ ಕೈಗಳನ್ನು ನನ್ನೆಲ್ಲಾ ಬಲ ಬಿಟ್ಟು ಹಿಂದಕ್ಕೆ ಎಳೆದುಕೊಳ್ಳುತ್ತೇನೆ. ಎಳೆದ ರಭಸಕ್ಕೆ ಕನ್ನಡಿ ನನ್ನ ಮೇಲೆ ಬಿದ್ದು ತಲೆಗೆ ಹೊಡೆದುಕೊಂಡು ಚೂರುಚೂರಾಗುತ್ತದೆ. ಎಲ್ಲಾ ಚೂರುಗಳಲ್ಲೂ ರಕ್ತ ಚಿಮ್ಮುತ್ತಿರುವ ನನ್ನ ನೂರಾರು ಮುಖಗಳು. ಭಯದಿಂದ ಚೀರುತ್ತೇನೆ.

ಎಚ್ಚರವಾಗುವುದರೊಂದಿಗೆ ಕಣ್ಣು ತೆರೆದುಕೊಳ್ಳುತ್ತವೆ. ಜಿರೋ ಕ್ಯಾಂಡಲ್ ಬಲ್ಬಿನ ಬೆಳಕಿನಲ್ಲಿ ಎದುರಿನ ಗೋಡೆಯನ್ನು ಅಲಂಕರಿಸಿದ್ದ ದೊಡ್ಡ ಆಂಟಿಕ್ ಇಟಾಲಿಯನ್ ಗಡಿಯಾರದಲ್ಲಿ ಸಮಯ ಎರಡು ಗಂಟೆ ತೋರುತ್ತಿದೆ. ಗಂಟಲು ವಿಪರೀತವಾಗಿ ಒಣಗಿದ್ದರಿಂದ ಪಕ್ಕದಲ್ಲಿ ಇದ್ದ ಜಗ್ಗಿನಿಂದ ಒಂದು ಗ್ಲಾಸ್ ನೀರು ಕುಡಿದು, ರಿಸಸ್ ಮಾಡಿ ಬಂದು ಹಾಸಿಗೆಯ ಮೇಲೆ ಉರುಳಿಕೊಂಡಿದ್ದೆ. ವಿಚಿತ್ರವಾದ ಕನಸು ವಿಪರೀತವಾದ ಕಳವಳವನ್ನುಂಟು ಮಾಡಿದ್ದರಿಂದ ಶರೀರದಲ್ಲಿ ಒಂದಿಷ್ಟು ಬೆವರು ಕಾಣಿಸಿಕೊಂಡಿತ್ತು. ಹಾಗೆ ನೋಡಿದರೆ ರಾತ್ರಿ ಮಾಮೂಲಿಯಂತೆ ಮೂರು ಲಾರ್ಜ್ ಸ್ಕಾಚ್ ತೆಗೆದುಕೊಂಡಿದ್ದೆ. ತಿಂಗಳ ಹಿಂದೆ ತಾನೆ ಮಲ್ಲಿಗೆ ನರ್ಸಿಂಗ್ ಹೋಂನಲ್ಲಿ ಮೂರು ಸಾವಿರ ಕೊಟ್ಟು ಟೋಟಲ್ ಬಾಡಿ ಚೆಕಪ್ ಮಾಡಿಸಿಕೊಂಡಿದ್ದೆ. ಬಿಪಿ, ಶುಗರ್, ಕೊಲೆಸ್ಟ್ರಾಲ್ ಎಲ್ಲವೂ ನಾರ್ಮಲ್ ಇತ್ತು. ಪ್ರತಿನಿತ್ಯ ಮೂರು ಲಾರ್ಜ್ ಹಾಕುವುದರ ಬಗ್ಗೆ ಯಾವುದೇ ಎಗ್ಗಿಲ್ಲದೆ ಡಾಕ್ಟರ್ ಬಳಿ ಹೇಳಿದ್ದೆ. ಡಾಕ್ಟರ್ ನಗುತ್ತಾ,